**ಕರ್ನಾಟಕ ಸರ್ಕಾರ**
**ಸಮಗ್ರ ಮಕ್ಕಳ ರಕ್ಷಣಾ ಯೋಜನೆ**

ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/68/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:05.05.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್-19 ಹಿನ್ನೆಲೆಯಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಬರುವ ಎಲ್ಲಾ ಮಕ್ಕಳಿಗೆ ಹಾಗೂ ಅಧಿಕಾರಿ/ಸಿಬ್ಬಂದಿಗಳಿಗೆ ಉಪಯುಕ್ತವಾಗುವಂತಹ ಮಾಹಿತಿಯ ಬಗ್ಗೆ.

ಉಲ್ಲೇಖ: ಚೈಲ್ಡ್ ಲೈನ್ ಇಂಡಿಯಾ ಫೌಂಡೇಷನ್ ಮತ್ತು ಯುನಿಸೆಫ್ ಇವರು ಹೊರಡಿಸಿರುವ ಸಂಚಿಕೆಗಳು ಮತ್ತು ಇತರೆ ಮಾಹಿತಿ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ಹೊರತಂದಿರುವಂತಹ ಮಕ್ಕಳು ವಾಯು ಮತ್ತು ಕರೋನ-ಭಾಗ 1 ಮತ್ತು 2 ಪುಸ್ತಕಗಳು ಹಾಗೂ ANA-M-GOMEZ ಇವರು ಆಂಗ್ಲ ಭಾಷರಯಲ್ಲಿ ರಚಿಸಿದ ದಿ ಸ್ಟೋರಿ ಆಫ್ ದಿ ಆಯಿಸ್ಟರ್ ಅಂಡ್ ದಿ ಬಟರ್‌ಫ್ಲೈ ಮತ್ತು ದಿ ಕರೋನಾ ವೈರಸ್ ಅಂಡ್ ಮೀ ಎಂಬ ಪುಸ್ತಕವನ್ನು(ANA-M-GOMEZ) ಆಂಗ್ಲ ಭಾಷೆಯಲ್ಲಿ ರೂಪಿಸಿರುತ್ತಾರೆ. ಈ ಆಂಗ್ಲ ಮೂಲದ ಪುಸ್ತಕಗಳನ್ನು ಸಿಆರ್‌ಟಿ ಟ್ರಸ್ಟ್ ಇವರು ಕನ್ನಡಕ್ಕೆ ಈ ಹಿಂದೆಯೇ ಅನುವಾದ ಮಾಡಿದ್ದು, ಇವುಗಳನ್ನು ಆಗಿಂದಾಗ್ಗೆ ವಾಟ್ಸಪ್ ಮೂಲಕ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ, ಎಲ್ಲಾ ಮಕ್ಕಳಿಗೆ ಮತ್ತು ಅಧಿಕಾರಿ/ಸಿಬ್ಬಂದಿಗಳಿಗೆ ತಲುಪಿಸಲು ಸೂಚಿಸಿ ಈಗಾಗಲೇ ವಾಟ್ಸಪ್ ಮೂಲಕ ಕಳುಹಿಸಲಾಗಿದೆ. ಇವುಗಳಲ್ಲಿ ಮಕ್ಕಳು ವಾಯು ಮತ್ತು ಕರೋನ-ಭಾಗ 1ನ್ನು ಶ್ರೀಮತಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು ಹಾಗೂ ಉಳಿದ 2 ಪುಸ್ತಕಗಳನ್ನು ಸಿಆರ್‌ಟಿರವರು ಅನುವಾದಿಸಿರುತ್ತಾರೆ. ಅದನ್ನೇ ಮುಂದುವರೆಸಿ ಮತ್ತೆರಡು ಸಂಚಿಕೆಗಳನ್ನು ಕನ್ನಡಕ್ಕೆ ಸಿಆರ್‌ಟಿರವರು ಅನುವಾದಿಸಿರುತ್ತಾರೆ.

**"ಕೋವಿಡ್-19 ಸಂಕಷ್ಟದಲ್ಲಿ ಮಕ್ಕಳಿಗಾಗಿ ಸಾಮಾಜಿಕ ಮನೋ ಸ್ವಾಸ್ಥ್ಯ ಆರೈಕೆ, ಪೋಷಕರು ಮತ್ತು ಪಾಲಕರಿಗೆ ಮಾಹಿತಿ ಕೈಪಿಡಿ"**ಯು ಮೂಲ ಆಂಗ್ಲ ಭಾಷೆಯಲ್ಲಿದ್ದು ಇದನ್ನು ಚೈಲ್ಡ್ ಲೈನ್ ಇಂಡಿಯಾ ಫೌಂಡೇಶನ್ ಮತ್ತು ಯುನಿಸೆಫ್‌ನವರು ಜಂಟಿಯಾಗಿ ಹೊರತಂದಿರುತ್ತಾರೆ. ಆಂಗ್ಲ ಮೂಲದಿಂದ ಇದನ್ನು ಸಿಆರ್‌ಟಿ ರವರು ಕನ್ನಡಕ್ಕೆ ಬಾಷಾಂತರ ಮಾಡಿರುತ್ತಾರೆ.

**"ಕರೋನಾ ವೈರಸ್ ಮಕ್ಕಳಿಗಾಗಿ ಒಂದು ಪುಸ್ತಕ"** ಇದರ ಮೂಲ ಆಂಗ್ಲ ವರ್ಷನ್‌ನ್ನು ಎಲಿಜಬೆತ್ ಜೆನ್ನರ್, ಕೇಟ್ ವಿಲ್ಸನ್ ಮತ್ತು ನಿಯಾ ರಾಬರ್ಟ್ಸ್ ಇವರು ರಚಿಸಿರುತ್ತಾರೆ. ಇದನ್ನು ಸಿಆರ್‌ಟಿ ರವರು ಕನ್ನಡಕ್ಕೆ ಅನುವಾದಿಸಿರುತ್ತಾರೆ.

ಸಿಆರ್‌ಟಿ ಟ್ರಸ್ಟ್ ರವರು ಮೇಲಿನ ಅನುವಾದಗಳೊಂದಿಗೆ ಇನ್ನೂ ಹಲವಾರು ಐಇಸಿ ಮಾಹಿತಿಯನ್ನು ಸಿದ್ಧಪಡಿಸಿದ್ದು, ಉದಾಹರಣೆಗೆ: **"ಹಾವು-ಏಣಿ ಆಟವಾಡುವ ವಿಚಾರ ತಿಳಿದುಕೊಳ್ಳಿ"** ಮತ್ತು **"ಕೋವಿಡ್-19ರ ಈ ಕಾಲದ ಮುಖ್ಯ ಪದಗಳನ್ನು ಹುಡುಕಿ"** ಇತ್ಯಾದಿ ಐಇಸಿ ಮೆಟೀರಿಯಲ್ಸ್‌ಗಳನ್ನೂ ಸಹ ಈ ಪತ್ರದೊಂದಿಗೆ ಕಳುಹಿಸಲಾಗುತ್ತಿದ್ದು, ಮಕ್ಕಳು ಮತ್ತು ಯೋಜನೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಸದರಿ ಐಇಸಿ ಮಾಹಿತಿಯಿಂದ ಪ್ರಯೋಜನ ಪಡೆಯಬಹುದೆಂದು ನಿರೀಕ್ಷಿಸಲಾಗಿದೆ.

ಸದರಿ ಪುಸ್ತಕಗಳನ್ನು ಅನುವಾದಿಸಿದ್ದಕ್ಕೆ ಶ್ರೀ ಎನ್.ವಿ. ವಾಸುದೇವ ಶರ್ಮಾ, ಕಾರ್ಯನಿರ್ವಾಹಕ ನಿರ್ದೇಶಕರು, ಚೈಲ್ಡ್ ರೈಟ್ಸ್ ಟ್ರಸ್ಟ್ ಹಾಗೂ ಸಿ.ಆರ್.ಟಿ. ತಂಡ, ಬೆಂಗಳೂರು ಇವರಿಗೆ ಮತ್ತು ಕಿಡ್ಸ್ ವಾಯು ಮತ್ತು ಕರೋನ ಭಾಗ-1 ಇದನ್ನು ಕನ್ನಡಕ್ಕೆ ಭಾಷಾಂತರಿಸಿದ್ದಕ್ಕೆ ಸಹಕರಿಸಿದ ಶ್ರೀಮತಿ ವಾಸಂತಿ ಉಪ್ಪಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು ಜಿಲ್ಲೆ ಇವರಿಗೂ ಸಹ ಇಲಾಖೆ ವತಿಯಿಂದ ಧನ್ಯವಾದಗಳು.

**ಲಗತ್ತುಗಳು:**

1) ಕಿಡ್ಸ್ ವಾಯು ಮತ್ತು ಕರೋನ ಭಾಗ-1 & 2
2) ದಿ ಸ್ಟೋರಿ ಆಫ್ ದಿ ಆಯಿಸ್ಟರ್ ಅಂಡ್ ದಿ ಬಟರ್‌ಪ್ಲೈ
   ದಿ ಕರೋನಾ ವೈರಸ್ ಅಂಡ್ ಮೀ
3) ಕೋವಿಡ್-19 ಸಂಕಷ್ಟದಲ್ಲಿ ಮಕ್ಕಳಿಗಾಗಿ ಸಾಮಾಜಿಕ
   ಮನೋ ಸ್ವಾಸ್ಥ್ಯ ಆರೈಕೆ, ಪೋಷಕರು ಮತ್ತು ಪಾಲಕರಿಗೆ ಮಾಹಿತಿ ಕೈಪಿಡಿ
4) ಕರೋನಾ ವೈರಸ್ ಮಕ್ಕಳಿಗಾಗಿ ಒಂದು ಪುಸ್ತಕ
5) ಐಇಸಿ ಮೆಟೀರಿಯಲ್ಸ್‌ಗಳು

ತಮ್ಮ ವಿಶ್ವಾಸಿ,

05.05.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

ಪ್ರತಿಯನ್ನು:-

1) ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳಿಗೆ.
2) ಎಲ್ಲಾ ಬಾಲನ್ಯಾಯ ಮಂಡಳಿಗಳಿಗೆ.
3) ಎಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.